**FDP/09/2011**
**PW-1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **24.09.2019**

ಮುಂದುವರೆದ ಪಾಟೀ ಸವಾಲುಃ ಶ್ರೀ. ಎಮ ಎಮ ಎಸ ಪ್ರತಿವಾದಿ ಪರ ವಕೀಲರಿಂದ.

1) ಬೆಳಗಾವಿ ನಗರದ ಸುತ್ತಳತೆ 25-30 ಕಿ.ಮೀ. ಇರಬಹದು. ಅದರಲ್ಲಿ ಎಷ್ಟು ವಿಸ್ತೀರ್ಣದಲ್ಲಿ commercial establishments ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಬೆಳಗಾವಿ ಬಸ್ ನಿಲ್ದಾನದಿಂದ ಕೆಎಲ್‌ಇ ಆಸ್ಪತ್ರೆ ನಾಲ್ಕು ಕಿ.ಮಿ ಇದೆ ಎಂದರೆ ಸರಿ. ಕೆಎಲ್‌ಇ ಆಸ್ಪತ್ರೆ ಬೆಳಗಾವಿಯ ಅಂಚಿನಲ್ಲಿದೆ ಎಂದರೆ ಸುಳ್ಳು. Jain collage of engineering MCA, MBA ಪಿರನವಾಡಿಯಲ್ಲಿ ಎಂದರೆ ಸಾಕ್ಷಿಯು ಪೀರನವಾಡಿಯ ಹತ್ತಿರ ಇದೆ ಎಂದು ಹೇಳುತ್ತಾರೆ. ಬೆಳಗಾವಿ ನಗರ ಮತ್ತು ಪೀರನವಾಡಿ ಗ್ರಾಮದ ನಡುವೆ Jain collage of engineering MCA, MBA ಬರುತ್ತವೆ. ದಾವ ಆಸ್ತಿಯಿಂದ Jain collage of engineering ಸಮಾರು 5 ಕಿ.ಮೀ ಇದೆ. ಬೆಳಗಾವಿಯಿಂದ ಪೀರನವಾಡಿ ಎಷ್ಟು ದೂರ ಇದೆ ಎಂದು ನನಗೆ ಗೊತ್ತಿಲ್ಲ. ಬೆಳಗಾವಿಯಿಂದ ಪೀರನವಾಡಿ 7 ರಿಂದ 8 ಕಿ.ಮೀ ಇದೆ ಎಂದರೆ ನನಗೆ ಗೊತ್ತಿಲ್ಲ. Jain collage of engineering MCA, MBA ಪೀರನವಾಡಿ ಗ್ರಾಮದ ಸರಹದ್ದಿನಲ್ಲಿ ಬರುತ್ತದೆ ಎಂದರೆ ಸುಳ್ಳು.

2) Angadi institute of technology and management ಸಂಸ್ಥೆ ಸಾವಗಾಂವ ಗ್ರಾಮದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಆದರೆ ದಾವ ಆಸ್ತಿಯಿಂದ ಸದರಿ Angadi institute of technology and management ಸಂಸ್ಥೆ ಸುಮಾರು 5

**FDP/09/2011**
**PW-1**

ಕಿ.ಮೀ ದೂರದಲ್ಲಿದೆ. ದಾವ ಆಸ್ತಿಯಿಂದ Angadi institute of technology and management ಸಂಸ್ಥೆ 12 ಕಿ.ಮೀ ದೂರ ಇದೆ ಎಂದರೆ ಸುಳ್ಳು. KLE nursing collage ಕುಮಾರಸ್ವಾಮಿ ಲೇಔಟ ಹತ್ತಿರ ಇದೆ, ಇನ್ನೊಂದು ನೆಹರು ನಗರದಲ್ಲಿದೆ. ನನ್ನ ಪ್ರಮಾಣ ಪತ್ರದ 5 ನೇ ಖಂಡಿಕೆಯಲ್ಲಿ ನೆಹರು ನಗರದ KLE nursing collage ಉಲ್ಲೇಖಿಸಿದ್ದೇನೆ. ದಾವ ಆಸ್ತಿಯಿಂದ ಸದರಿ KLE nursing collage ಸುಮಾರು 3.5 ರಿಂದ 4 ಕಿ.ಮೀ ದೂರಲ್ಲಿದೆ. ನನ್ನ ಪ್ರಮಾಣ ಪತ್ರದಲ್ಲಿ ನೆಹರೂ ನಗರದ KLE nursing collage ಎಂದು ಉಲ್ಲೇಖಿಸಿಲ್ಲ ಎಂದರ ಇರಬಹದು.

3) Commando training centre ನಾನವಾಡಿ ಗ್ರಾಮದ ನಂತರ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಆದರೆ ನನ್ನ ಪ್ರಮಾಣ ಪತ್ರದಲ್ಲಿ ಬೆಳಗಾವಿಯ cantonment area ಲ್ಲಿ ಇರುವ Commando training centre ಪ್ರಸ್ತಾಪಿಸಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ಬೆಳಗಾವಿಯ cantonment area ಲ್ಲಿ ಇರುವ Commando training centre ಉಲ್ಲೇಖಿಸಿಲ್ಲ ಎಂದರೆ ಇರಬಹದು. ನನಗೆ ಬೆಳಗಾವಿಯಲ್ಲಿ Commando training centre ಎಷ್ಟು ಇದೆ ಎಂದು ಗೊತ್ತಿಲ್ಲ. ಆದರೆ ನನಗೆ ಗೊತ್ತಿರುವ Commando training centre cantonment area ದಲ್ಲಿದೆ. ನನ್ನ ಪ್ರಮಾಣ ಪತ್ರದ 5 ನೇ ಖಂಡಿಕೆಯಲ್ಲಿ ಬೆಳಗಾವಿಯ ತಾಲೂಕಿನಲ್ಲಿ ಬರುವ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಉಲ್ಲೇಹಿಸಿದ್ದೇನೆ ಎಂದರೆ ಸುಳ್ಳು. ನನ್ನ ಪ್ರಮಾಣ ಪತ್ರದಲ್ಲಿ ಪ್ರಸಿದ್ದಿ ಶಿಕ್ಷಣ

ಸಂಸ್ಥೆಗಳನ್ನು ಮಾತ್ರ ಬರೆದಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿರುವ ಶಿಕ್ಷಣ ಸಂಸ್ಥೆಗಳು ದಾವಾ ಆಸ್ತಿಯ ಹತ್ತಿರ ಇದ್ದಾವೆ ಎಂದು ಸುಳ್ಳು ಸಾಕ್ಷಿ ನುಡಿದಿದ್ದೆ ಎಂದರೆ ಸುಳ್ಳು.

4) ದಾವಾ ಆಸ್ತಿಯ ಹತ್ತಿರ ನನಗೆ ಗೊತ್ತಿದ್ದ ಹಾಗೇ ಕೇವಲ 1 ಬಾರಿ ರಸ್ತೆ ಅಗಲೀಕರಣ ಆಗಿದೆ. ಸಿಡಿಪಿಯಲ್ಲಿ ದಾವಾ ಆಸ್ತಿಯ ಮುಂದಿರುವ ರಸ್ತೆಯ ಅಗಲ ಎಷ್ಟು ಎಂದು ತೋರಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಸಿಡಿಪಿ ನೋಡಿಲ್ಲ. ನೂಕ್ಲಿಯಸ ಮಾಲ್ ರಾಮಲಿಂಗಕಿಂಡ ಗಲ್ಲಿಯಲ್ಲಿದೆ. ದಾವಾ ಆಸ್ತಿಯಿಂದ ನೂಕ್ಲಿಯಸ ಮಾಲ್ ಸುಮಾರು 50 ಮೀಟರ ದೂರ ಇರಬಹದು. ನೂಕ್ಲಿಯಸ ಮಾಲ್ ಯಾವಗ ಕಟ್ಟಲಾಗಿತ್ತು ಎಂದು ಖಚಿತವಾಗಿ ಹೇಳಲು ಬರುವುದಿಲ್ಲ. ಸುಮಾರು 2000 ನೇ ಇಸವಿಯಲ್ಲಿ ನೂಕ್ಲಿಯಸ ಮಾಲ್ ಕಟ್ಟಿರಬಹದು. Master plan ಆದ ನಂತರ ನೂಕ್ಲಿಯಸ ಮಾಲ್ ಕಟ್ಟಲಾಗಿದೆ. ನೂಕ್ಲಿಯಸ ಮಾಲ್ ಮುಂದಿರುವ ರಸ್ತೆಯ ಅಗಲ ಸುಮಾರು 45 ರಿಂದ 50 ಪೀಟ್ ಇರಬಹದು. ನೂಕ್ಲಿಯಸ ಮಾಲ್ ನ ಮುಂದಿರುವ ರಸ್ತೆಯ ಅಂಚಿನಲ್ಲಿ ಕಂಪೌಂಡ ವಾಲ್ ಇದೆ ಅದರ ಒಳಗೆ ಪಾರ್ಕಿಂಗ್ ಏರಿಯಾ ಇದೆ ಎಂದರೆ ಸರಿ. ದಾವಾ ಆಸ್ತಿಯು ಮುಂದಿರುವ ರಸ್ತೆ 45 ಪೀಟ್ ಇದೆ. ದಾವಾ ಆಸ್ತಿಯ ಮುಂದಿರುವ ರಸ್ತೆಯ ಅಂಚಿನ ನಂತರ ಪಾರ್ಕಿಂಗ್ ಏರಿಯಾ ಎಂದು ಇಲ್ಲ, ಆದರೆ 3-4 ರಷ್ಟು ಖುಲ್ಲಾ ಜಾಗ ಇದೆ. ಸಿಟಿಎಸ ನಂ. 1750/ 1 ಮತ್ತು 2 ರ ಉದ್ದ ಎಷ್ಟು ಇದೆ ಎಂದರೆ ಸದರಿ ಪ್ರಶ್ನೆ irrelevant ಇರುವುದರಿಂದ ನಾನು

**FDP/09/2011**
**PW-1**

ಉತ್ತರಿಸುವುದಿಲ್ಲ. ಸಿಟಿಎಸ 1750/1 ಮತ್ತು 2 ರಲ್ಲಿ ಸಂಬಂದಪಟ್ಟ ಇಲಾಖೆ ರಸ್ತೆ ಅಗಲೀಕರಣಕ್ಕಾಗಿ ಯಾವುದೇ ಜಾಗವನ್ನು 1999 ರ ನಂತರ ಉಪಯೋಗಿಸಿಲ್ಲ. ಸದರಿ ಆಸ್ತಿಯ ಯಾವುದೇ ಜಾಗವನ್ನು 1999 ಕ್ಕಿಂತ ಮೊದಲು ರಸ್ತೆ ಅಗಲೀಕರಣಕ್ಕಾಗಿ ಉಪಯೋಗಿಸಿದ್ದಾರೋ ಇಲ್ಲವೊ ನನಗೆ ಗೊತ್ತಿಲ್ಲ. ಸಿಟಿಎಸ 1750/1 ಮತ್ತು 2 ರಲ್ಲಿ ಪಾರ್ಕಿಂಗ ಸಲುವಾಗಿ ಪಶ್ಚಿಮ ಭಾಗಕ್ಕೆ ಕ್ಲಾಸಿಪೈಡ ಇದೆಯಾೇ ಇಲ್ಲವೋ ಗೊತ್ತಿಲ್ಲ ಆದರೆ ಪಾರ್ಕಿಂಗ ಸಲುವಾಗಿ ಜಾಗ ಇದೆ. ಹಾಗೇ ಪಾರ್ಕಿಂಗ ಸಲುವಾಗಿ ಇರುವ ಜಾಗದ ಸಿಟಿಎಸ ನಂಬರ ನನಗೆ ಗೊತ್ತಿಲ್ಲ. ಪಾರ್ಕಿಂಗ ಜಾಗ ಸರ್ಕಾರದ್ದೊ ಅಥವಾ ಖಾಸಗಿ ವ್ಯಕ್ತಿಯದ್ದೊ ನನಗೆ ಗೊತ್ತಿಲ್ಲ. ಅದರ ವಿಸ್ತಿರ್ಣ 5x70 ಪೀಟ್ ಇದೆ. ಪಾರ್ಕಿಂಗಗಾಗಿ ಇರುವ ಜಾಗದ ಮಾಲೀಕ ನಾನಗೀರುವುದಿಲ್ಲ.

ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ,
ಮತ್ತು ಜೆ. ಎಂ. ಎಫ್. ಸಿ., ಬೆಳಗಾವಿ.

**FDP/09/2011**
**PW-1**